॥ ಜ್ಞಾನಾದೇವ ತು ಕೈವಲ್ಯಮ್ ॥

# ವೇದಾಂತಭಾರತೀ

(ತುಮಕೂರು ವಿಶ್ವವಿದ್ಯಾನಿಲಯದಿಂದ ಮಾನಿತ ಸಂಶೋಧನ ಸಂಸ್ಥೆ)
ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ – 571 602 ಮೈಸೂರು ಜಿಲ್ಲೆ

# ಬೋಧರೂಪಮ್

## ॥ ದಕ್ಷಿಣಾಮೂರ್ತಿಸ್ತೋತ್ರಮ್ ॥

**ಉಪಾಸಕಾನಾಂ ಯದುಪಾಸನೀಯಮ್**
**ಉಪಾತ್ತವಾಸಂ ವಟಶಾಖಿಮೂಲೇ ।**
**ತದ್ಧಾಮ ದಾಕ್ಷಿಣ್ಯಜುಷಾ ಸ್ವಮೂರ್ತ್ಯಾ**
**ಜಾಗರ್ತು ಚಿತ್ತೇ ಮಮ ಬೋಧರೂಪಮ್ ॥ 1 ॥**

ಉಪಾಸಕರಾದವರು ಉಪಾಸನೆ ಮಾಡುವಂಥದು ದಕ್ಷಿಣಾಮೂರ್ತಿಯ ದಿವ್ಯವಾದ ವಿಗ್ರಹ. ಆಲದ ಮರದ ಬುಡದಲ್ಲಿ ನೆಲೆಸಿರುವಂಥ ದಯಾಪೂರ್ಣನೂ ಜ್ಞಾನಸ್ವರೂಪನೂ ಆದ ಆ ದಕ್ಷಿಣಾಮೂರ್ತಿಯು ನನ್ನ ಚಿತ್ತದಲ್ಲಿ ಜ್ಞಾನವನ್ನು ಜಾಗ್ರತಗೊಳಿಸಲಿ.

**ಅದ್ರಾಕ್ಷಮಕ್ಷೀಣದಯಾನಿಧಾನಮ್**
**ಆಚಾರ್ಯಮಾದ್ಯಂ ವಟಮೂಲಭಾಗೇ ।**
**ಮೌನೇನ ಮಂದಸ್ಮಿತಭೂಷಿತೇನ**
**ಮಹರ್ಷಿಲೋಕಸ್ಯ ತಮೋ ನುದಂತಮ್ ॥ 2 ॥**

ವಟವೃಕ್ಷದ ಬುಡದಲ್ಲಿ ದಕ್ಷಿಣಾಮೂರ್ತಿಯನ್ನು ಕಂಡೆ. ಅವನೋ ಅಪಾರವಾದ ಕರುಣೆಯುಳ್ಳವನು; ಲೋಕಕ್ಕೆಲ್ಲ ಅದ್ವೈತದ ದಿವ್ಯತತ್ತ್ವವನ್ನು ಉಪದೇಶಿಸಿದ ಮೊದಲ ಆಚಾರ್ಯ. ಅವನು ಸದಾ ಮೌನಿಯಾಗಿದ್ದರೂ ಮುಖದಲ್ಲಿ ಮುಗುಳುನಗೆ ಮಿನುಗುತ್ತಿದೆ. ಇದರಿಂದಲೇ ಮಹರ್ಷಿಗಳ ತಮೋಗುಣವು ದೂರವಾಗುತ್ತದೆ.

**ವಿದ್ರಾವಿತಾಶೇಷತಮೋಗಣೇನ**
**ಮುದ್ರಾವಿಶೇಷೇಣ ಮುಹುರ್ಮುನೀನಾಮ್ ।**
**ನಿರಸ್ಯ ಮಾಯಾಂ ದಯಯಾ ವಿಧತ್ತೇ**
**ದೇವೋ ಮಹಾಂಸ್ತತ್ತ್ವಮಸೀತಿ ಬೋಧಮ್ ॥ 3 ॥**

ಆ ಮಹಾದೇವನ ಕೈಯಲ್ಲಿ ಜ್ಞಾನಮುದ್ರೆಯಿದೆ; ಅದು ತಮೋಗುಣದ ರಾಶಿಯನ್ನು ನಿವಾರಿಸಲು ಸಮರ್ಥವಾದುದು. ಅದರಿಂದ ಮುನಿಗಳು ತಮೋಗುಣದ ಪ್ರಭಾವಕ್ಕೆ ಒಳಗಾಗುವುದಿಲ್ಲ. ಅಷ್ಟೇ ಅಲ್ಲ, ಆ ಮುದ್ರೆಯು 'ತತ್ತ್ವಮಸಿ' ಎಂಬ ಅರಿವನ್ನು ದಯೆಯಿಂದ ಬೋಧಿಸುತ್ತದೆ. (ಅಂದರೆ ಬ್ರಹ್ಮಾನುಭವವಾಗುತ್ತದೆ.)

**ಅಪಾರಕಾರುಣ್ಯಸುಧಾತರಂಗೈಃ**
**ಅಪಾಂಗಪಾತೈರವಲೋಕಯಂತಮ್ ।**
**ಕಠೋರಸಂಸಾರನಿದಾಘತಪ್ತಾನ್**
**ಮುನೀನಹಂ ನೌಮಿ ಗುರುಂ ಗುರೂಣಾಮ್ ॥4॥**

ಅವನ ಕಡೆಗಣ್ಣಿನ ನೋಟವೆಂದರೆ ಅಮೃತದಂತೆ ಶೀತಲವಾದುದು. ಅಂತೆಯೇ ಅವು ಅಮೃತಸಮುದ್ರದ ತರಂಗಗಳು. ಬಿಸಿಲಿನ ಬೇಗೆಯಿಂದ ಬಳಲಿದವರಿಗೆ ಚಂದ್ರನ ಅಮೃತಕಿರಣಗಳು ತಂಪನ್ನೆರೆಯುವಂತೆ ಸಂಸಾರವೆಂಬ ಬಿಸಿಲಿನ ಬೇಗೆಯಿಂದ ಬಳಲಿದ ಮುನಿಗಳಿಗೆ ಅವನ ಕಟಾಕ್ಷಪಾತದಿಂದ ನೆಮ್ಮದಿ. ಅವನು ಗುರುಗಳಿಗೆ ಗುರು; ಮಹಾಗುರು. ಅಂಥವನಿಗೆ ನಮಸ್ಕಾರ.

**ಮಮಾದ್ಯದೇವೋ ವಟಮೂಲವಾಸೀ**
**ಕೃಪಾವಿಶೇಷಾತ್ಕೃತಸಂನಿಧಾನಃ ।**
**ಓಂಕಾರರೂಪಾಮುಪದಿಶ್ಯ ವಿದ್ಯಾಮ್**
**ಆವಿದ್ಯಕಧ್ವಾಂತಮಪಾಕರೋತು ॥ 5 ॥**

ವಟವೃಕ್ಷದ ಬುಡದಲ್ಲಿರುವ ಆದಿದೇವನಾದ ದಕ್ಷಿಣಾಮೂರ್ತಿಯ ಸನ್ನಿಧಿಯು ದೊರೆತುದು ಅವನ

ಅನುಗ್ರಹದ ಫಲ. ಓಂಕಾರರೂಪದ ವಿದ್ಯೆಯನ್ನು ಅವನು ಉಪದೇಶಿಸಲಿ. ಅದರಿಂದ ನನ್ನ ಅವಿದ್ಯೆಯೆಂಬ ಕತ್ತಲೆ ಕಳೆಯಲಿ.

**ಕಲಾಭಿರಿಂದೋರಿವ ಕಲ್ಪಿತಾಂಗಂ**
**ಮುಕ್ತಾಕಲಾಪೈರಿವ ಬದ್ಧಮೂರ್ತಿಮ್ ।**
**ಆಲೋಕಯೇ ದೇಶಿಕಮಪ್ರಮೇಯಮ್**
**ಅನಾದ್ಯವಿದ್ಯಾತಿಮಿರಪ್ರಭಾತಮ್ ॥ 6 ॥**

ಬಿಳಿಯದಾದ ಸ್ವಚ್ಛ ಶರೀರ ಅವನದು. ಬೆಳದಿಂಗಳಿನಿಂದಲೇ ಅವಯವಗಳು ರೂಪುಗೊಂಡವೋ, ಮುತ್ತಿನ ಮಣಿಗಳಿಂದ ಕಟ್ಟನಿಲ್ಲಿಸಿದೆಯೋ ಎನ್ನುವಂತಿದೆ ಆ ದಿವ್ಯ ವಿಗ್ರಹ. ಅದು ಅಳತೆಗೆ ಮೀರಿದ್ದು; ಅವಿದ್ಯೆಯೆಂಬ ಕತ್ತಲೆಯನ್ನು ಕಳೆಯುವ ಬೆಳ್ಳಂಬೆಡಗು. ಅಂಥ ಆಚಾರ್ಯನು ನನ್ನ ಕಂಗಳಿಗೆ ಗೋಚರನಾಗಲಿ.

**ಸ್ವದಕ್ಷಜಾನುಸ್ಥಿತವಾಮಪಾದಂ**
**ಪಾದೋದರಾಲಂಕೃತಯೋಗಪಟ್ಟಮ್ ।**
**ಅಪಸ್ಮೃತೇರಾಹಿತಪಾದಮಂಗೇ**
**ಪ್ರಣೌಮಿ ದೇವಂ ಪ್ರಣಿಧಾನವಂತಮ್ ॥ 7 ॥**

ಧ್ಯಾನಸ್ಥನಾಗಿರುವ ಆ ದೇವನ ಎಡಗಾಲು ಬಲಮೊಣಕಾಲಿನ ಮೇಲಿದೆ. ಇಳಿಬಿಟ್ಟ ಬಲಗಾಲಿನ ಪಾದದಿಂದ ಅಪಸ್ಮಾರನೆಂಬ ರಕ್ಕಸನನ್ನು ತುಳಿಯುತ್ತಿದ್ದಾನೆ. ಸರ್ಪವೆಂಬ ಯೋಗಪಟ್ಟದಿಂದ ಅಲಂಕೃಂತನಾಗಿರುವ ಆ ದೇವನಿಗೆ ನಮಸ್ಕಾರ.

**ತತ್ತ್ವಾರ್ಥಮಂತೇವಸತಾಮೃಷೀಣಾಂ**
**ಯುವಾಪಿ ಯಃ ಸನ್ನುಪದೇಷ್ಟುಮೀಷ್ಟೇ ।**
**ಪ್ರಣೌಮಿ ತಂ ಪ್ರಾಕ್ತನಪುಣ್ಯಜಾಲೈಃ**
**ಆಚಾರ್ಯಮಾಶ್ಚರ್ಯಗುಣಾಧಿವಾಸಮ್ ॥ 8 ॥**

ಅವನು ಯುವಕ. ಅವನಿಗೆ ವೃದ್ಧರಾದ ಋಷಿಗಳು ಶಿಷ್ಯರು. ಅವರಿಗೆಲ್ಲ ತತ್ತ್ವವನ್ನು ಉಪದೇಶಿಸುವ ಮಹಾಮಹಿಮ ಅವನು. ಅಚ್ಚರಿಯಿಂದ ಕೂಡಿದ ಗುಣಗಳಿಂದ ತುಂಬಿರುವ ಅವನನ್ನು ನಮಸ್ಕರಿಸುವುದು ಕೂಡ ಪೂರ್ವಪುಣ್ಯದ ಪ್ರಭಾವವಿದ್ದಾಗ ಮಾತ್ರ ಸಾಧ್ಯ. ಅಂತಹ ಗುರುವಿಗೆ ನಮಸ್ಕಾರ.

**ಏಕೇನ ಮುದ್ರಾಂ ಪರಶುಂ ಕರೇಣ**
**ಕರೇಣ ಚಾನ್ಯೇನ ಮೃಗಂ ದಧಾನಃ ।**
**ಸ್ವಜಾನುವಿನ್ಯಸ್ತಕರಃ ಪುರಸ್ತಾತ್**
**ಆಚಾರ್ಯಚೂಡಾಮಣಿರಾವಿರಸ್ತು ॥ 9 ॥**

ಅವನು ಒಂದು ಕೈಯಲ್ಲಿ ಪರಶುಮುದ್ರೆಯನ್ನು ಇನ್ನೊಂದು ಕೈಯಲ್ಲಿ ಜಿಂಕೆಯನ್ನು ಧರಿಸಿದ್ದಾನೆ. ಮೊಣಕಾಲಮೇಲೆ ಕೈಯನ್ನಿಟ್ಟುಕೊಂಡಿದ್ದಾನೆ. ಇಂಥ ಆಚಾರ್ಯಶ್ರೇಷ್ಠನು ನನಗೆ ಪ್ರತ್ಯಕ್ಷವಾಗಿ ದರ್ಶನವೀಯಲಿ.

**ಆಲೇಪವಂತಂ ಮದನಾಂಗಭೂತ್ಯಾ**
**ಶಾರ್ದೂಲಕೃತ್ತ್ಯಾ ಪರಿಧಾನವಂತಮ್ ।**
**ಆಲೋಕಯೇ ಕಂಚನ ದೇಶಿಕೇಂದ್ರಮ್**
**ಅಜ್ಞಾನವಾರಾಕರವಾಡವಾಗ್ನಿಮ್ ॥ 10 ॥**

ಅವನು ಮೈಗೆ ಮನ್ಮಥನನ್ನು ಸುಟ್ಟ ಬೂದಿಯನ್ನು ಬಳಿದುಕೊಂಡಿದ್ದಾನೆ. ಹುಲಿಯ ಚರ್ಮವನ್ನು ಸುತ್ತಿಕೊಂಡಿದ್ದಾನೆ. ಅಜ್ಞಾನವೆಂಬ ಸಮುದ್ರದ ನೀರನ್ನು ಬತ್ತಿಸುವ ವಡವಾಗ್ನಿ ಅವನು; ಆಚಾರ್ಯರಲ್ಲಿ ಶ್ರೇಷ್ಠ. ಅವನು ನನ್ನ ಕಂಗಳಿಗೆ ಗೋಚರಿಸಲಿ.

**ಚಾರುಸ್ಮಿತಂ ಸೋಮಕಲಾವತಂಸಂ**
**ವೀಣಾಧರಂ ವ್ಯಕ್ತಜಟಾಕಲಾಪಮ್ ।**
**ಉಪಾಸತೇ ಕೇಚನ ಯೋಗಿನಸ್ತ್ವಾಮ್**
**ಉಪಾತ್ತನಾದಾನುಭವಪ್ರಮೋದಮ್ ॥ 11 ॥**

ಅವನದು ಸದಾ ಮುಗುಳುನಗೆ; ಚಂದ್ರಕಲೆ ಅವನ ಶಿರೋಭೂಷಣ; ವೀಣೆ ಕೈಗೊಪ್ಪಿದೆ. ಜಟೆಯನ್ನು ಧರಿಸಿದ್ದಾನೆ. ನಾದಾನುಭವದಿಂದ ಆನಂದಹೊಂದುತ್ತಾನೆ. ಎಲ್ಲ ಲಕ್ಷಣಗಳಿಂದ ಕೂಡಿದ ದಿವ್ಯವಾದ ಆಕಾರವನ್ನು ಕೆಲವರು ಯೋಗಿಗಳು ಉಪಾಸಿಸುತ್ತಾರೆ.

**ಉಪಾಸತೇ ಯಂ ಮುನಯಃ ಶುಕಾದ್ಯಾಃ**
**ನಿರಾಶಿಷೋ ನಿರ್ಮಮತಾಧಿವಾಸಾಃ ।**
**ತಂ ದಕ್ಷಿಣಾಮೂರ್ತಿತನುಂ ಮಹೇಶಮ್**
**ಉಪಾಸ್ಮಹೇ ಮೋಹಮಹಾರ್ತಿಶಾಂತ್ಯೈ ॥ 12 ॥**

ಶುಕರೇ ಮುಂತಾದ ಮುನಿಗಳು ಆಸೆಯನ್ನು ತೊರೆದವರು; ಮಮತೆಯನ್ನು ತೊರೆದವರು. ಅಂತೆಯೇ ನಿರ್ಮಮತೆಯೇ ಅವರ ಉಡುಗೆ–ತೊಡುಗೆ. ಅಂಥ ಮುನಿಗಳಿಗೆ ಆರಾಧ್ಯದೈವವೆಂದರೆ ದಕ್ಷಿಣಾಮೂರ್ತಿ–ರೂಪದ ಮಹೇಶ್ವರ. ಅವನನ್ನು ಆರಾಧಿಸಿ ಮೋಹವೆಂಬ ಘೋರ ಸಂಕಟವನ್ನು ಪರಿಹರಿಸಿಕೊಳ್ಳೋಣ.

**ಕಾಂತ್ಯಾ ನಿಂದಿತಕುಂದಕಂದಲವಪು–**
**ನ್ಯರ್ಗ್ರೋಧಮೂಲೇ ವಸನ್**
**ಕಾರುಣ್ಯಾಮೃತವಾರಿಭಿರ್ಮುನಿಜನಂ**
**ಸಂಭಾವಯನ್ವೀಕ್ಷಿತೈಃ ।**
**ಮೋಹಧ್ವಾಂತವಿಭೇದನಂ ವಿರಚಯನ್**
**ಬೋಧೇನ ತತ್ತಾದೃಶಾ**
**ದೇವಸ್ತತ್ತ್ವಮಸೀತಿ ಬೋಧಯತು ಮಾಂ**
**ಮುದ್ರಾವತಾ ಪಾಣಿನಾ ॥ 13 ॥**

ಆ ದೇವನ ಮೈಕಾಂತಿಯ ಬಿಳುಪು ಮಲ್ಲಿಗೆಯ ಮೊಗ್ಗುಗಳನ್ನೂ ಮೀರಿಸಿದೆ. ವಟವೃಕ್ಷದ ಬುಡ ಅವನ ನಿವಾಸ. ಅವನ ಕಣ್ನೋಟ ದಯೆಯೆಂಬ ಅಮೃತಜಲವನ್ನು

ಸೂಸುವಂಥದು. ಆ ನೋಟದಿಂದ ಮುನಿಗಳನ್ನು ಅನುಗ್ರಹಿಸುತ್ತಾನೆ. ತನ್ನ ಬೋಧೆಯಿಂದ ಮೋಹವೆಂಬ ಕತ್ತಲೆಯನ್ನು ನಿವಾರಿಸುತ್ತಾನೆ. ಜ್ಞಾನಮುದ್ರಾಭೂಷಿತನಾದ ಅವನ ಹಸ್ತವು "ತತ್ತ್ವಮಸಿ" ಎಂಬ ಬೋಧೆಯನ್ನು ನೀಡುವಂಥದು. ನನಗೂ ಆ ಜ್ಞಾನವುಂಟಾಗಲಿ.

**ಅಗೌರಗಾತ್ರೈರಲಲಾಟನೇತ್ರೈಃ**
**ಅಶಾಂತವೇಷೈರಭುಜಂಗಭೂಷೈಃ ।**
**ಅಬೋಧಮುದ್ರೈರನಪಾಸ್ತನಿದ್ರೈಃ**
**ಅಪೂರ್ಣಕಾಮೈರಮರೈರಲಂ ನಃ ॥ 14 ॥**

ದೇವತೆಗಳೇನೋ ಸಾಕಷ್ಟಿದ್ದಾರೆ. ಆದರೆ ಅವರಾರೂ ದಕ್ಷಿಣಾಮೂರ್ತಿಯಂತೆ ಬಿಳಿಬಣ್ಣದವರಲ್ಲ; ಹಣೆಗಣ್ಣಿನವರಲ್ಲ; ಶಾಂತವಾದ ವೇಷವುಳ್ಳವರಲ್ಲ; ಭುಜಂಗಭೂಷಣರಲ್ಲ; ಜ್ಞಾನಮುದ್ರೆ ಅವರಲ್ಲಿಲ್ಲ. ಅವರಾರೂ ನಿದ್ದೆಯನ್ನು ಗೆದ್ದವರಲ್ಲ; ಕಾಮನೆಗಳು ಬಿಟ್ಟವರಲ್ಲ; ಅಂತಹ ದೇವತೆಗಳು ನಮಗೆ ಬೇಡ.

**ದೈವತಾನಿ ಕತಿ ಸಂತಿ ಚಾವನೌ**
**ನೈವ ತಾನಿ ಮನಸೋ ಮತಾನಿ ಮೇ ।**
**ದೀಕ್ಷಿತಂ ಜಡಧಿಯಾಮನುಗ್ರಹೇ**
**ದಕ್ಷಿಣಾಭಿಮುಖಮೇವ ದೈವತಮ್ ॥ 15 ॥**

ದೇವತೆಗಳ ಸಂಖ್ಯೆ ಈ ಭೂಮಿಯಲ್ಲಿ ಸಾಕಷ್ಟಿದೆ. ಆದರೆ ನನ್ನ ಮನಸ್ಸಿಗೊಪ್ಪುವವರು ಇವರಲ್ಲ. ಮಂದಮತಿಗಳನ್ನು ಅನುಗ್ರಹಿಸುವ ದೀಕ್ಷೆಯನ್ನು ತೊಟ್ಟ ದಕ್ಷಿಣಾಮೂರ್ತಿಯೊಬ್ಬನೇ ನನ್ನ ಮನಸ್ಸಿಗೊಪ್ಪುವ ದೇವ.

**ಮುದಿತಾಯ ಮುಗ್ಧಶಶಿನಾವತಂಸಿನೇ**
**ಭಸಿತಾವಲೇಪರಮಣೀಯಮೂರ್ತಯೇ ।**
**ಜಗದಿಂದ್ರಜಾಲರಚನಾಪಟೀಯಸೇ**
**ಮಹಸೇ ನಮೋಽಸ್ತು ವಟಮೂಲವಾಸಿನೇ ॥ 16 ॥**

ಅವನು ಸದಾಕಾಲವೂ ಆನಂದದಿಂದ ತುಂಬಿರುವವ; ಎಳೆಯ ಚಂದ್ರನನ್ನು ಆಭರಣವಾಗಿ ಧರಸಿದವ; ಭಸ್ಮವನ್ನು ಬಳಿದುಕೊಂಡ ಆ ಶರೀರ ಸುಂದರವಾಗಿ ಕಾಣುತ್ತಿದೆ; ಜಗತ್ತು ಎಂಬ ಇಂದ್ರಜಾಲವನ್ನು ನಿರ್ಮಿಸುವುದರಲ್ಲಿ ಕುಶಲ; ಅತ್ಯಂತ ಕಾಂತಿಯುಕ್ತ; ವಟವೃಕ್ಷಮೂಲ ಅವನ ನಿವಾಸ; ಅಂಥ ದಕ್ಷಿಣಾಮೂರ್ತಿಗೆ ನಮಸ್ಕಾರ.

**ವ್ಯಾಲಂಬಿನೀಭಿಃ ಪರಿತೋ ಜಟಾಭಿಃ**
**ಕಲಾವಶೇಷೇಣ ಕಲಾಧರೇಣ ।**
**ಪಶ್ಯಲ್ಲಲಾಟೇನ ಮುಖೇಂದುನಾ ಚ**
**ಪ್ರಕಾಶಸೇ ಚೇತಸಿ ನಿರ್ಮಲಾನಾಮ್ ॥ 17 ॥**

ಸುತ್ತಲೂ ಜೋಲಾಡುವ ಜಟೆಗಳು; ಕಲಾಮಾತ್ರಶೇಷನಾದ ಚಂದ್ರ; ಹಣೆಗಣ್ಣಿನಿಂದೊಪ್ಪುವ ಮುಖಚಂದ್ರ; ಇದು ನಿರ್ಮಲಚಿತ್ತರ ಮನದಲ್ಲಿ ಬೆಳಗುವ ದಿವ್ಯರೂಪ.

**ಉಪಾಸಕಾನಾಂ ತ್ವಮುಮಾಸಹಾಯಃ**
**ಪೂರ್ಣೇಂದುಭಾವಂ ಪ್ರಕಟೀಕರೋಷಿ ।**
**ಯದದ್ಯ ತೇ ದರ್ಶನಮಾತ್ರತೋ ಮೇ**
**ದ್ರವತ್ಯಹೋ ಮಾನಸಚಂದ್ರಕಾಂತಃ ॥ 18 ॥**

ಉಮೆಯಿಂದೊಡಗೂಡಿದ ನೀನು ಉಪಾಸಕರಿಗೆ ದರ್ಶನನೀಡುವಾಗ ಪೂರ್ಣಚಂದ್ರನಂತೆ ಕಾಣುವೆ. ಮನಸ್ಸೆಂಬ ಚಂದ್ರಕಾಂತಮಣಿಯು ಆ ನಿನ್ನ ದರ್ಶನದಿಂದ ಕರಗಿ ನೀರಾಗಿರುವುದೇ ಸಾಕ್ಷಿ. (ಉಮಾಮಹೇಶ್ವರ ದರ್ಶನವಾದಾಗ ಚಂದ್ರನ ಕಿರಣಗಳಿಂದ ಚಂದ್ರಕಾಂತ ಮಣಿಯು ಕರಗಿ ನೀರಾಗುವಂತೆ ಮನಸ್ಸು ದ್ರವಿಸುವುದೆಂಬುದು ಭಾವ).

**ಯಸ್ತೇ ಪ್ರಸನ್ನಾಮನುಸಂದಧಾನೋ**
**ಮೂರ್ತಿಂ ಮುದಾ ಮುಗ್ಧಶಶಾಂಕಮೌಲೇಃ ।**
**ಐಶ್ವರ್ಯಮಾಯುರ್ಲಭತೇ ಚ ವಿದ್ಯಾಮ್**
**ಅಂತೇ ಚ ವೇದಾಂತಮಹಾರಹಸ್ಯಮ್ ॥ 19 ॥**

ಚಂದ್ರಶೇಖರನ ಪ್ರಸನ್ನವಾದ ಆಕಾರವನ್ನು ಪ್ರಸನ್ನಚಿತ್ತದಿಂದ ಧ್ಯಾನಿಸುವವನಿಗೆ ಐಶ್ವರ್ಯ, ಆಯುಸ್ಸು, ವಿದ್ಯೆಗಳಲ್ಲದೇ ಅಂತ್ಯಕಾಲದಲ್ಲಿ ವೇದಾಂತದ ಮಹಾ ರಹಸ್ಯವಾದ ಬ್ರಹ್ಮಸಾಕ್ಷಾತ್ಕಾರವೂ ಆಗುತ್ತದೆ.

***********

## ॥ ದಕ್ಷಿಣಾಮೂರ್ತಿವರ್ಣಮಾಲಾಸ್ತೋತ್ರಮ್ ॥

**ಓಮಿತ್ಯೇತದ್ಯಸ್ಯ ಬುಧೈರ್ನಾಮ ಗೃಹೀತಂ**
**ಯದ್ಭಾಸೇದಂ ಭಾತಿ ಸಮಸ್ತಂ ವಿಯದಾದಿ ।**
**ಯಸ್ಯಾಜ್ಞಾತಃ ಸ್ವಸ್ವಪದಸ್ಥಾ ವಿಧಿಮುಖ್ಯಾಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 1 ॥**

ವಿದ್ವಾಂಸರು ದಕ್ಷಿಣಾಮೂರ್ತಿಯನ್ನು ಪ್ರಣವಸ್ವರೂಪಿಯೆಂದು ತಿಳಿಯುತ್ತಾರೆ. ಆಕಾಶ, ಪೃಥ್ವಿಯೇ ಮುಂತಾದ ಸಮಸ್ತ ಪ್ರಪಂಚವು ಬೆಳಗುವುದು ಅವನ ತೇಜಸ್ಸಿನಿಂದ. ಬ್ರಹ್ಮ, ಇಂದ್ರ, ಮರುದ್ಗಣಗಳೇ ಮುಂತಾದ ದೇವತೆಗಳು ತಮ್ಮ ತಮ್ಮ ಪದವಿಗಳಲ್ಲಿ ವಿರಾಜಿಸುತ್ತಿರುವುದು ಅವನ ಅಪ್ಪಣೆಯಿಂದ. ಅವನು ನಮ್ಮ ಅಂತರಾತ್ಮಸ್ವರೂಪಿ. ಅಂಥ ದಕ್ಷಿಣಾಮೂರ್ತಿಗೆ ನಮಸ್ಕಾರ.

**ನಮ್ರಾಂಗಾಣಾಂ ಭಕ್ತಿಮತಾಂ ಯಃ ಪುರುಷಾರ್ಥಾನ್**
**ದತ್ವಾ ಕ್ಷಿಪ್ರಂ ಹಂತಿ ಚ ತತ್ಸರ್ವವಿಪತ್ತೀಃ ।**
**ಪಾದಾಂಭೋಜಾಧಸ್ತನಿತಾಪಸ್ಮೃತಿಮೀಶಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 2 ॥**

ದಕ್ಷಿಣಾಮೂರ್ತಿಯು ಭಕ್ತಿಯಿಂದ ನಮಸ್ಕರಿಸುವ ಭಕ್ತರಿಗೆ ಪುರುಷಾರ್ಥಗಳನ್ನು ಅನುಗ್ರಹಿಸುತ್ತಾನೆ. ಅವರ ಎಲ್ಲ ವಿಪತ್ತುಗಳನ್ನು ಶೀಘ್ರವಾಗಿ ನಿವಾರಿಸುತ್ತಾನೆ. ತನ್ನ ಕೋಮಲವಾದ ಪಾದಕಮಲಗಳಿಂದ ಭಯಂಕರನಾದ ಅಪಸ್ಮಾರ ರಕ್ಕಸನನ್ನು ಕೆಳಕ್ಕೆ ಕೆಡವಿದ್ದೂ ಮಹೇಶನೇ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಮೋಹಧ್ವಸ್ತ್ಯೈ ವೈಣಿಕವೈಯಾಸಿಕಿಮುಖ್ಯಾಃ**
**ಸಂವಿನ್ಮುದ್ರಾಪುಸ್ತಕವೀಣಾಕ್ಷಗುಣಾನ್ಯಮ್ ।**
**ಹಸ್ತಾಂಭೋಜೈರ್ಬಿಭ್ರತಮಾರಾಧಿತವಂತಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 3 ॥**

ಮೋಹರಹಿತರೆಂದು ಪ್ರಸಿದ್ಧರಾದ ನಾರದ, ಶುಕ ಮುಂತಾದ ಮುನಿಗಳು ತಮ್ಮ ಮೋಹದ ನಾಶಕ್ಕಾಗಿ ಆರಾಧಿಸಿದ್ದು ಜ್ಞಾನಮುದ್ರೆ, ಪುಸ್ತಕ, ವೀಣೆ, ಜಪಸರಗಳನ್ನು ಕರಕಮಲಗಳಲ್ಲಿ ಧರಿಸಿದ ಈ ದಕ್ಷಿಣಾಮೂರ್ತಿಯ ದಿವ್ಯ ವಿಗ್ರಹವನ್ನು. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಭದ್ರಾರೂಢಂ ಭದ್ರದಮಾರಾಧಯಿತೄಣಾಂ**
**ಭಕ್ತಿಶ್ರದ್ಧಾಪೂರ್ವಕಮೀಶಂ ಪ್ರಣಮಂತಿ ।**
**ಆದಿತ್ಯಾ ಯಂ ವಾಂಛಿತಸಿದ್ಧ್ಯೈ ಕರುಣಾಬ್ಧಿಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 4 ॥**

ಭದ್ರಾಸನದಲ್ಲಿ ಕುಳಿತ ಅವನು ತನ್ನ ಆರಾಧಕರಿಗೆ ಮಂಗಲವನ್ನುಂಟುಮಾಡುತ್ತಾನೆ. ಕರುಣಾಸಾಗರನಾದ ಈಶ ಅವನು. ಅಂತೆಯೇ ಅದಿತಿಯ ಮಕ್ಕಳಾದ ಇಂದ್ರಾದಿದೇವತೆಗಳು ತಮ್ಮ ಇಷ್ಟಾರ್ಥವನ್ನು ಈಡೇರಿಸಿಕೊಳ್ಳಲು ಭಕ್ತಿ ಶ್ರದ್ಧೆಗಳಿಂದ ಅವನಿಗೆ ನಮಸ್ಕರಿಸುತ್ತಾರೆ. ಅಂಥ ಅಂತರಾತ್ಮನಾದ ಗುರು ದಕ್ಷಿಣಾಮೂರ್ತಿಗೆ ನಮಸ್ಕಾರ.

**ಗರ್ಭಾಂತಃಸ್ಥಾಃ ಪ್ರಾಣಿನ ಏತೇ ಭವಪಾಶ–**
**ಚ್ಛೇದೇ ದಕ್ಷಂ ನಿಶ್ಚಿತವಂತಃ ಶರಣಂ ಯಮ್ ।**
**ಆರಾಧ್ಯಾಂಘ್ರಿಪ್ರಸ್ಫುರದಂಭೋರುಹಯುಗ್ಮಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 5 ॥**

ಆರಾಧನೆಗೆ ಯೋಗ್ಯವಾದ ಕಾಂತಿಯುಕ್ತವಾದ ಪಾದಗಳೆಂಬ ಕಮಲದ್ವಯವುಳ್ಳವನು ಅವನು. ಅವನನ್ನು ಗರ್ಭದೊಳಗಿರುವ ಜೀವಿಗಳು ಸಂಸಾರಬಂಧನವನ್ನು ಬಿಡಿಸುವಲ್ಲಿ ನಿಪುಣನಾದವನೆಂದು ನಿಶ್ಚಯಿಸಿ ಶರಣುಹೊಂದುತ್ತವೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ವಕ್ತ್ರಂ ಧನ್ಯಾಃ ಸಂಸೃತಿವಾರ್ಧೇರತಿಮಾತ್ರಾತ್**
**ಭೀತಾಃ ಸಂತಃ ಪೂರ್ಣಶಶಾಂಕದ್ಯುತಿ ಯಸ್ಯ ।**
**ಸೇವಂತೇಽಧ್ಯಾಸೀನಮನಂತಂ ವಟಮೂಲಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 6 ॥**

ಹುಣ್ಣಿಮೆಯ ಚಂದ್ರನಂತೆ ಕಾಂತಿಯುಕ್ತವಾದುದು ಅವನ ನಗುಮೊಗ. ಅನಂತನಾದ ಅವನು ವಟವೃಕ್ಷದ ಮೂಲದಲ್ಲಿ ಕುಳಿತಿರುತ್ತಾನೆ. ಸಂಸಾರಸಾಗರದಿಂದ ಬೆದರಿದ ಪುಣ್ಯಾತ್ಮರು (ಅದರಿಂದ ಪಾರಾಗಲು) ಅವನನ್ನು ನೆನೆಯುತ್ತಾರೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ತೇಜಃಸ್ತೋಮೈರಂಗದಸಂಘಟ್ಟಿತಭಾಸ್ವನ್**
**ಮಾಣಿಕ್ಯೋತ್ಥೈರ್ಭಾಸಿತವಿಶ್ವೋ ರುಚಿರೈರ್ಯಃ ।**
**ತೇಜೋಮೂರ್ತಿಂ ಖಾನಿಲತೇಜಃಪ್ರಮುಖಾಬ್ಧಿಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 7 ॥**

ಅವನ ತೋಳುಗಳಲ್ಲಿ ತೋಳಬಂದಿಗಳಿವೆ. ಅವುಗಳಲ್ಲಿರುವ ದಿವ್ಯ ಮಾಣಿಕ್ಯಗಳ ಪ್ರಭೆಗಳು ಒಂದನ್ನೊಂದು ಘರ್ಷಿಸುತ್ತ ಹೊರಹೊಮ್ಮಿಸುವ ಮನೋಹರವಾದ ಕಾಂತಿಯಿಂದ ವಿಶ್ವವೆಲ್ಲವೂ ಬೆಳಗುತ್ತದೆ. ಅವನು ಆಕಾಶ, ವಾಯು, ಅಗ್ನಿ, ಜಲವೇ ಮುಂತಾದವುಗಳನ್ನೆಲ್ಲ ವ್ಯಾಪಿಸಿದ ತೇಜೋಮೂರ್ತಿ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ದಧ್ಯಾಜ್ಯಾದಿದ್ರವ್ಯಕಕರ್ಮಾಣ್ಯಖಿಲಾನಿ**
**ತ್ಯಕ್ತ್ವಾ ಕಾಂಕ್ಷಾಂ ಕರ್ಮಫಲೇಷ್ವತ್ರ ಕರೋತಿ ।**
**ಯಜ್ಜಿಜ್ಞಾಸಾಂ ರೂಪಫಲಾರ್ಥೀ ಕ್ಷಿತಿದೇವಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 8 ॥**

ಪರಬ್ರಹ್ಮಸ್ವರೂಪಿಯಾದ ನಿನ್ನನ್ನು ತಿಳಿಯುವ ಇಚ್ಛೆಯುಳ್ಳ ವಿಪ್ರರು ಮೊಸರು, ತುಪ್ಪ ಮುಂತಾದ ದ್ರವ್ಯಗಳನ್ನು ಬಳಸಿ ಮಾಡುವಂಥ ಯಜ್ಞ ಯಾಗಾದಿ ಕರ್ಮಗಳನ್ನೂ, ಕರ್ಮಫಲದ ಮೇಲಿನ ಆಸೆಯುನ್ನೂ ತೊರೆದು, ಬ್ರಹ್ಮಜಿಜ್ಞಾಸೆಯಲ್ಲಿ ತೊಡಗುತ್ತಾರೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಕ್ಷಿಪ್ರಂ ಲೋಕೇ ಯಂ ಭಜಮಾನಃ ಪೃಥುಪುಣ್ಯಃ**
**ಪ್ರಧ್ವಸ್ತಾಧಿಃ ಪ್ರೋಜ್ಝಿತಸಂಸೃತ್ಯಖಿಲಾರ್ತಿಃ ।**
**ಪ್ರತ್ಯಗ್ಭೂತಂ ಬ್ರಹ್ಮ ಪರಂ ಸನ್ ರಮತೇ ಚ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 9 ॥**

ಲೋಕದಲ್ಲಿ ಜನ್ಮಜನ್ಮಾಂತರಗಳಲ್ಲಿ ಗಳಿಸಿದ ಅಪಾರಪುಣ್ಯದ ಪ್ರಭಾವವುಳ್ಳವನು ಆಧಿ-ವ್ಯಾಧಿಗಳಿಂದ ದೂರವಾಗುತ್ತಾನೆ. ಸಾಂಸಾರಿಕವಾದ ಸಂಕಟಗಳಿಂದ ಮುಕ್ತನಾಗುತ್ತಾನೆ. ಅಂಥವನು ದಕ್ಷಿಣಾಮೂರ್ತಿಯನ್ನು

ಆರಾಧಿಸಿ ಅಂತರಾತ್ಮವೇ ಆಗಿರುವ ಪರಬ್ರಹ್ಮವೇ ತಾನಾಗಿ ಆನಂದಿಸುತ್ತಾನೆ. ಅಂಥ ಜ್ಞಾನಸ್ವರೂಪಿ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಣಾನೇತ್ಯೇವಂ ಯನ್ಮನುಮಧ್ಯಸ್ಥಿತವರ್ಣಾನ್**
**ಭಕ್ತಾಃ ಕಾಲೇ ವರ್ಣಗೃಹೀತ್ಯೈ ಪ್ರಜಪಂತಃ ।**
**ಮೋದಂತೇ ಸಂಪ್ರಾಪ್ತಸಮಸ್ತಶ್ರುತಿತಂತ್ರಾಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 10 ॥**

ದಕ್ಷಿಣಾಮೂರ್ತಿ ಮಂತ್ರದ ಮಧ್ಯದಲ್ಲಿರುವ 'ಣಾ' ಎಂಬ ವರ್ಣವು 'ನ' ಎಂಬುದಾಗಿ ಗ್ರಹಿಸಿದಾಗ ಅದು ಪ್ರಪಂಚದ ಸ್ಥಿತಿಯನ್ನು ಇಲ್ಲವೆಂಬುದನ್ನು ತಿಳಿಸುತ್ತದೆ. ಹೀಗೆ ಭಾವಿಸಿ ಸಕಾಲದಲ್ಲಿ ವರ್ಣಸಿದ್ಧಿಗಾಗಿ ಜಪಿಸುವ ಭಕ್ತರು ಶ್ರುತಿತಂತ್ರಗಳೆಲ್ಲದರ ಪರಮಗುರಿಯಾದ ಬ್ರಹ್ಮ-ಸಾಕ್ಷಾತ್ಕಾರವನ್ನು ಹೊಂದಿ ಆನಂದವನ್ನು ಅನುಭವಿಸುತ್ತಾರೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಮೂರ್ತಿಶ್ಛಾಯಾನಿರ್ಜಿತಮಂದಾಕಿನಿಕುಂದ-**
**ಪ್ರಾಲೇಯಾಂಭೋರಾಶಿಸುಧಾಭೂತಿಸುರೇಭಾ ।**
**ಯಸ್ಯಾಭ್ರಾಭಾಹಾಸವಿಧೌ ದಕ್ಷಶಿರೋಧಿಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 11 ॥**

ಕಂಠದಲ್ಲಿ ವಿಷವನ್ನು ಧರಿಸಿ ನೀಲಕಂಠನಾದ ಇವನ ಮೂರ್ತಿಯ ಛಾಯೆಯು ಗಂಗೆ, ಮಲ್ಲಿಗೆ, ಹಿಮ, ಸಮುದ್ರದ ನೊರೆ, ಬೆಳದಿಂಗಳು, ಇಂದ್ರನ ಆನೆಗಳ ಕಾಂತಿಯನ್ನೂ ಮೀರಿಸಿದೆ. ನಗೆಯ ಬಗೆಯಲ್ಲಿ ಅದು ಬಿಳಿಯ ಮೋಡದ ಕಾಂತಿಯಿಂದ ಕಂಗೊಳಿಸುತ್ತದೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ತಪ್ತಸ್ವರ್ಣಚ್ಛಾಯಜಟಾಜೂಟಕಟಾಹ-**
**ಪ್ರೋದ್ಯದ್ವೀಚೀವಲ್ಲಿವಿರಾಜತ್ ಸುರಸಿಂಧುಮ್ ।**

**ನಿತ್ಯಂ ಸೂಕ್ಷ್ಮಂ ನಿತ್ಯನಿರಸ್ತಾಖಿಲದೋಷಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 12 ॥**

ಅವನ ಜಟೆಗಳು ಕಾಯಿಸಿದ ಬಂಗಾರದಂತೆ ಕೆಂಬಣ್ಣದವು. ಆ ಜಟೆಗಳೇ ಕಟಾಹ ಅಥವಾ ಕೊಪ್ಪರಿಗೆ. ಅಲ್ಲಿಂದ ಹೊರಟ ತೆರೆಗಳೆಂಬ ಬಳ್ಳಿಗಳಿಂದ ಕೂಡಿದ ಗಂಗೆ ರಾರಾಜಿಸುತ್ತಿದ್ದಾಳೆ. ಅವನು ನಿತ್ಯ; ಸೂಕ್ಷ್ಮ; ದೋಷಗಳೆಲ್ಲದರಿಂದ ದೂರವಾಗಿರುವಂಥವನು. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಯೇನ ಜ್ಞಾತೇನೈವ ಸಮಸ್ತಂ ವಿದಿತಂ ಸ್ಯಾತ್**
**ಯಸ್ಮಾದನ್ಯದ್ವಸ್ತು ಜಗತ್ಯಾಂ ಶಶಶೃಂಗಮ್ ।**
**ಯಂ ಪ್ರಾಪ್ತಾನಾಂ ನಾಸ್ತಿ ಪರಂ ಪ್ರಾಪ್ಯಮನಾದಿಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 13 ॥**

ಅವನು ಸಾಕ್ಷಾತ್ ಪರಬ್ರಹ್ಮ. ಅವನನ್ನು ತಿಳಿದರೆ ಸಾಕು ಬೇರೇನನ್ನೂ ತಿಳಿಯುವ ಅವಶ್ಯಕತೆಯಿಲ್ಲ. ಅವನನ್ನು ಬಿಟ್ಟರೆ ಈ ಪ್ರಪಂಚದಲ್ಲಿ ಮತ್ತೊಂದು ವಸ್ತುವಿಲ್ಲ. ಮೊಲದ ಕೋಡಿನಂತೆ ಇನ್ನಿತರ ವಸ್ತುಗಳು ಅಸದ್ವಸ್ತುಗಳೇ ಆಗಿವೆ. ಅನಾದಿಪುರುಷನಾದ ಅವನನ್ನು ಪಡೆದ ಮೇಲೆ (ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದ ಮೇಲೆ) ಮತ್ತೆ ಪಡೆಯಬೇಕಾದುದು ಯಾವುದೂ ಇರುವುದಿಲ್ಲ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಮತ್ತೋ ಮಾರೋ ಯಸ್ಯ ಲಲಾಟಾಕ್ಷಿಭವಾಗ್ನಿ–**
**ಸ್ಫೂರ್ಜತ್ಕೀಲಪ್ರೋಷಿತಭಸ್ಮೀಕೃತದೇಹಃ ।**
**ತದ್ಭಸ್ಮಾಸೀದ್ಯಸ್ಯ ಸುಜಾತಃ ಪಟವಾಸಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 14 ॥**

ಲೋಕದಲ್ಲಿ ತನಗೆ ಎದುರಾಗುವವರು ಯಾರೂ ಇಲ್ಲವೆಂಬ ಸೊಕ್ಕು ಮನ್ಮಥನಿಗೆ. ಅವನು ಶಿವನನ್ನು ಕೆಣಕಲು ಬಾಣಪ್ರಯೋಗ ಮಾಡಿದಾಗ ಶಿವ ಹಣೆಗಣ್ಣನ್ನು ತೆರೆದ. ಅಲ್ಲಿ ಹುಟ್ಟಿದ ಬೆಂಕಿಯ ಕಿಡಿಗಳು ಸಿಡಿದು ಮನ್ಮಥನನ್ನು ಸುಟ್ಟುಹಾಕಿದವು. ಸುಗಂಧದ್ರವ್ಯವನ್ನು ಲೇಪಿಸಿಕೊಳ್ಳುವಂತೆ ಅವನ ಭಸ್ಮವನ್ನು ಶಿವ ತನ್ನ ಮೈಗೆ ಬಳಿದುಕೊಂಡ. ಅಂಥ ಅಂತರಾತ್ಮನಾದ ಗುರು ದಕ್ಷಿಣಾಮೂರ್ತಿಗೆ ನಮಸ್ಕಾರ.

**ಹ್ಯಂಭೋರಾಶೌ ಸಂಸೃತಿರೂಪೇ ಲುಠತಾಂ ತತ್**
**ಪಾರಂ ಗಂತುಂ ಯತ್ಪದಭಕ್ತಿರ್ದೃಢನೌಕಾ ।**
**ಸರ್ವಾರಾಧ್ಯಂ ಸರ್ವಗಮಾನಂದಪಯೋಧಿಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 15 ॥**

ಸಂಸಾರವೆಂಬುದೊಂದು ಸಾಗರ. ಅಲ್ಲಿ ಸಿಲುಕಿ ಬಳಲುವ ಜೀವಿಗಳು ಅದರಾಚೆಗೆ ಹೋಗಲು ಇವನ ಪಾದಭಕ್ತಿಯೆಂಬ ಬಲಿಷ್ಠವಾದ ನೌಕೆಯನ್ನು ಆಶ್ರಯಿಸುತ್ತಾರೆ. ಎಲ್ಲರೂ ಆರಾಧಿಸಲು ಬಯಸುವಂಥ ಅವನು ಸರ್ವವ್ಯಾಪಿ; ಆನಂದಸಾಗರ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಮೇಧಾವೀ ಸ್ಯಾದಿಂದುವತಂಸಂ ಧೃತವೀಣಂ**
**ಕರ್ಪೂರಾಭಂ ಪುಸ್ತಕಹಸ್ತಂ ಕಮಲಾಕ್ಷಮ್ ।**
**ಚಿತ್ತೇ ಧ್ಯಾಯನ್ ಯಸ್ಯ ವಪುರ್ದ್ರಾಙ್ನಿಮಿಷಾರ್ಧಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 16 ॥**

ಚಂದ್ರಕಲಾಧರನೂ, ಕೈಗಳಲ್ಲಿ ವೀಣೆ ಮತ್ತು ಪುಸ್ತಕಗಳನ್ನು ಧರಿಸಿದವನೂ, ಕಮಲದಂಥ ಕಣ್ಣುಗಳುಳ್ಳವನೂ, ಕರ್ಪೂರದಂತೆ ಬೆಳ್ಳಗಿರುವವನೂ ಆಗಿರುವ, ಜ್ಞಾನಸ್ವರೂಪಿಯಾದ ಆ ಆದಿದೇವನ ದಿವ್ಯಶರೀರವನ್ನು

ಅರ್ಧನಿಮಿಷಕಾಲ ಚಿತ್ತದಲ್ಲಿ ಧ್ಯಾನಿಸಿದರೆ ಸಾಕು, ಆ ಕೂಡಲೇ ಉಪಾಸಕನು ಮೇಧಾವಿಯಾಗುತ್ತಾನೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಧಾಮ್ನಾಂ ಧಾಮ ಪ್ರೌಢರುಚೀನಾಂ ಪರಮಂ ಯತ್**
**ಸೂರ್ಯಾದೀನಾಂ ಯಸ್ಯ ಸ ಹೇತುರ್ಜಗದಾದೇಃ ।**
**ಏತಾವಾನ್ ಯೋ ಯಸ್ಯ ನ ಸರ್ವೇಶ್ವರಮೀಡ್ಯಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 17 ॥**

ಅವನ ತೇಜಸ್ಸು ಅತಿಶಯವಾದುದು. ಸೂರ್ಯನೇ ಮುಂತಾದ ವಿಶೇಷ ಕಾಂತಿಯುಕ್ತರ ತೇಜಸ್ಸಿಗಿಂತಲೂ ಹೆಚ್ಚಿನ ತೇಜವು ಅವನದು. ಅವನಿಂದಲೇ ಈ ಜಗತ್ತು ಆವಿರ್ಭವಿಸಿದೆ. ಅವನ ಮಹಿಮೆಯನ್ನು 'ಇಷ್ಟು' ಎಂದು ತೀರ್ಮಾನಿಸಲಾಗುವುದಿಲ್ಲ. ಅವನು ಸರ್ವೇಶ್ವರ; ಸ್ತುತಿಗೆ ಯೋಗ್ಯ. ಅಂಥ ಅಂತರಾತ್ಮನಾದ ಗುರು ದಕ್ಷಿಣಾಮೂರ್ತಿಗೆ ನಮಸ್ಕಾರ.

**ಪ್ರತ್ಯಾಹಾರಪ್ರಾಣನಿರೋಧಾದಿಸಮರ್ಥೈಃ**
**ಭಕ್ತೈರ್ದಾಂತೈಃ ಸಂಯತಚಿತ್ತೈರ್ಯತಮಾನೈಃ ।**
**ಸ್ವಾತ್ಮತ್ವೇನ ಜ್ಞಾಯತ ಏವ ತ್ವರಯಾ ಯಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 18 ॥**

ಪ್ರಾಣಾಯಾಮ ಪ್ರತ್ಯಾಹಾರ ಮುಂತಾದವು-ಗಳನ್ನು ಅಭ್ಯಸಿಸಿ, ಶಮ-ದಮವೇ ಮುಂತಾದ ಸಾಧನ ಸಂಪತ್ತನ್ನು ಹೊಂದಿದ ಪ್ರಯತ್ನ ಶೀಲರಾದ ಭಕ್ತರು, ಆ ದೇವನು ಆತ್ಮರೂಪಿಯಾಗಿರುವನೆಂಬುದನ್ನು ಶೀಘ್ರವಾಗಿ ತಿಳಿಯುತ್ತಾರೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಜ್ಞಾಂಶೀಭೂತಾನ್ ಪ್ರಾಣಿನ ಏತಾನ್ಫಲದಾತಾ**
**ಚಿತ್ತಾಂತಃಸ್ಥಃ ಪ್ರೇರಯತಿ ಸ್ವೇ ಸಕಲೇऽಪಿ ।**
**ಕೃತ್ಯೇ ದೇವಃ ಪ್ರಾಕ್ತನಕರ್ಮಾನುಸರಃ ಸನ್**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 19 ॥**

ಜೀವಿಗಳ ಅಂತಃಕರಣ ಅವನ ಆವಾಸಸ್ಥಾನ. ಅವನು ನಮ್ಮ ಪೂರ್ವಜನ್ಮದ ಕರ್ಮಗಳಿಗನುಸಾರವಾಗಿ ಫಲವನ್ನು ವಿತರಿಸುತ್ತಾನೆ. ಜ್ಞಾನಾಂಶರಾದ ಜೀವಿಗಳು ವಿವಿಧ ಕಾರ್ಯಗಳಲ್ಲಿ ತೊಡಗುವುದು ಅವನ ಪ್ರೇರಣೆಯಿಂದಲೇ. ಅಲ್ಲಿ ಪ್ರಾಕ್ತನಕರ್ಮದ ಪ್ರಭಾವವುಂಟು. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಪ್ರಜ್ಞಾಮಾತ್ರಂ ಪ್ರಾಪಿತಸಂವಿನ್ನಿಜಭಕ್ತಂ**
**ಪ್ರಾಣಾಕ್ಷಾದೇಃ ಪ್ರೇರಯಿತಾರಂ ಪ್ರಣವಾರ್ಥಮ್ ।**
**ಪ್ರಾಹುಃ ಪ್ರಾಜ್ಞಾ ಯಂ ವಿದಿತಾನುಶ್ರವತತ್ತ್ವಾಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 20 ॥**

ಅವನನ್ನು ಪ್ರಜ್ಞಾಮಾತ್ರ (ಪ್ರಜ್ಞಾನಘನ)ನೆಂದೂ, ಭಕ್ತರಿಗೆ ಜ್ಞಾನೋದಯವನ್ನುಂಟುಮಾಡುವವನೆಂದೂ, ಪ್ರಾಣ, ಇಂದ್ರಿಯ ಮುಂತಾದವುಗಳನ್ನು ಪ್ರೇರೇಪಿಸುವವನೆಂದೂ, ಓಂಕಾರದ ಅರ್ಥನೆಂದು, ವೇದ–ವೇದಾಂತಗಳ ರಹಸ್ಯವನ್ನು ತಿಳಿದ ಪ್ರಾಜ್ಞರು ಕೊಂಡಾಡುತ್ತಾರೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಯಸ್ಯಾಜ್ಞಾನಾದೇವ ನೃಣಾಂ ಸಂಸೃತಿಬಂಧೋ**
**ಯಸ್ಯ ಜ್ಞಾನಾದೇವ ವಿಮೋಕ್ಷೋ ಭವತೀತಿ ।**
**ಸ್ಪಷ್ಟಂ ಬ್ರೂತೇ ವೇದಶಿರೋ ದೇಶಿಕಮಾದ್ಯಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 21 ॥**

ಆ ದೇವನ ಜ್ಞಾನವಿಲ್ಲದಿರುವಾಗ ಮನುಷ್ಯರಿಗೆ ಸಂಸಾರಬಂಧನವು ಉಂಟಾಗುತ್ತದೆ, ಅವನ ಕುರಿತಾದ ಜ್ಞಾನವುಂಟಾದಾಗ ಮೋಕ್ಷವು ಪ್ರಾಪ್ತವಾಗುತ್ತದೆಯೆಂದು ಉಪನಿಷತ್ತುಗಳು ಸ್ಪಷ್ಟವಾಗಿ ಹೇಳುತ್ತವೆ. ಆ ದೇವನೇ ಆಚಾರ್ಯರಲ್ಲಿ ಮೊದಲಿಗನಾಗಿದ್ದಾನೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಛನ್ನೇಽವಿದ್ಯಾರೂಪಪಟೇನೈವ ಚ ವಿಶ್ವಂ**
**ಯತ್ರಾಧ್ಯಸ್ತಂ ಜೀವಪರೇಶತ್ವಮಪೀದಮ್ ।**
**ಭಾನೋರ್ಭಾನುಷ್ವಂಬುವದಸ್ತಾಖಿಲಭೇದಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 22 ॥**

ಅವಿದ್ಯೆಯೆಂಬ ಪಟವು ಮುಚ್ಚಿದಾಗ ಅರ್ಥಾತ್ ಅಜ್ಞಾನವು ಆವರಿಸಿದಾಗ ಇಲ್ಲದ ಪ್ರಪಂಚವು ಇರುವಂತೆ ಭಾಸವಾಗುತ್ತದೆ. ಒಬ್ಬ ಸೂರ್ಯನ ಪ್ರತಿಬಿಂಬಗಳು ನೀರಿನಲ್ಲಿ ಕಾಣುವಂತೆ ಪರಬ್ರಹ್ಮವು ಒಂದೇ ಆಗಿದ್ದರೂ ಜೀವಗಳು ಹಲವಾಗಿ ಕಾಣುವುದುಂಟು. ಜೀವ–ಪರಮಾತ್ಮರ ಭೇದವು ಅಧ್ಯಾಸವೇ. ವಾಸ್ತವವಾಗಿ ಇರುವುದು ಭೇದಗಳೆಲ್ಲದರಿಂದ ದೂರವಾದ ಅದ್ವೈತವಸ್ತು. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಸ್ವಾಪಸ್ವಪ್ನೌ ಜಾಗ್ರದವಸ್ಥಾಪಿ ನ ಯತ್ರ**
**ಪ್ರಾಣಶ್ಚೇತಃ ಸರ್ವಗತೋ ಯಃ ಸಕಲಾತ್ಮಾ ।**
**ಕೂಟಸ್ಥೋ ಯಃ ಕೇವಲಸಚ್ಚಿತ್ಸುಖರೂಪಃ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥23॥**

ಅಲ್ಲಿ ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯಗಳಿಲ್ಲ. ಪ್ರಾಣ, ಮನಸ್ಸು ಮುಂತಾಗಿ ಎಲ್ಲವನ್ನೂ

ವ್ಯಾಪಿಸಿದ ಸಕಲರ ಆತ್ಮವೂ ಅವನೇ. ಅವನು ಕೂಟಸ್ಥ; ಸಚ್ಚಿದಾನಂದಸ್ವರೂಪಿ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಹಾ ಹೇತ್ಯೇವಂ ವಿಸ್ಮಯಮೀಯುರ್ಮುನಿಮುಖ್ಯಾ**
**ಜ್ಞಾತೇ ಯಸ್ಮಿನ್ ಸ್ವಾತ್ಮತಯಾನಾತ್ಮವಿಮೋಹಃ ।**
**ಪ್ರತ್ಯಗ್ಭೂತೇ ಬ್ರಹ್ಮಣಿ ಯಾತಃ ಕಥಮಿತ್ಥಂ**
**ತಂ ಪ್ರತ್ಯಂಚಂ ದಕ್ಷಿಣವಕ್ತ್ರಂ ಕಲಯಾಮಿ ॥ 24 ॥**

ಬ್ರಹ್ಮವು ನಮ್ಮಲ್ಲಿ ಅಂತಃಸ್ಥವಾಗಿದೆ; ಅದು ನಮ್ಮ ಆತ್ಮವೇ ಆಗಿದೆಯೆಂಬ ಅರಿವು ಮೂಡಿದ ಕ್ಷಣದಲ್ಲಿಯೇ ಆತ್ಮವಲ್ಲದ ಇತರ ವಸ್ತುಗಳ ಬಗೆಗಿನ ವ್ಯಾಮೋಹವು ಹೇಳ ಹೆಸರಿಲ್ಲದಂತೆ ಮಾಯವಾದುದನ್ನು ತಿಳಿದ ಮುನೀಶ್ವರರು ಆಶ್ಚರ್ಯದಿಂದ ಹಾ! ಹಾ! ಎಂಬ ಉದ್ಗಾರವನ್ನು ಹೊರಡಿಸುತ್ತಾರೆ. ಅಂಥ ಅಂತರಾತ್ಮನಾದ ದಕ್ಷಿಣಾಮೂರ್ತಿಗೆ ನಮಸ್ಕಾರ.

**ಯೈಷಾ ರಮ್ಯೈರ್ಮತ್ತಮಯೂರಾಭಿಧವೃತ್ತೈಃ**
**ಆದೌ ಕ್ಲೃಪ್ತಾ ಯನ್ಮನುವರ್ಣೈರ್ಮುನಿಭಂಗೀ ।**
**ತಾಮೇವೈತಾಂ ದಕ್ಷಿಣವಕ್ತ್ರಃ ಕೃಪಯಾಸೌ**
**ಊರೀಕುರ್ಯಾದ್ದೇಶಿಕಸಮ್ರಾಟ್ ಪರಮಾತ್ಮಾ ॥25॥**

ಈ ಸ್ತೋತ್ರವು ರಮ್ಯವಾದ ಮತ್ತಮಯೂರವೆಂಬ ವೃತ್ತದಲ್ಲಿ ರಚಿತವಾಗಿದೆ. **'ಓಂ ನಮೋ ಭಗವತೇ ದಕ್ಷಿಣಾಮೂರ್ತಯೇ ಮಹ್ಯಂ ಮೇಧಾ ಪ್ರಜ್ಞಾಂ ಪ್ರಯಚ್ಛ ಸ್ವಾಹಾ'** ಎಂಬ ಮಂತ್ರದ ವರ್ಣಗಳು ಕ್ರಮವಾಗಿ ಪ್ರತಿಯೊಂದು ಶ್ಲೋಕ ಮೊದಲ ಅಕ್ಷರವಾಗಿ ಇಲ್ಲಿ ಮೂಡಿಬಂದಿದೆ. ಈ ಸ್ತೋತ್ರವು ಆಚಾರ್ಯಶ್ರೇಷ್ಠನೂ ಪರಮಾತ್ಮನೂ ಆದ ಗುರುದಕ್ಷಿಣಾಮೂರ್ತಿಗೆ ಪ್ರಿಯವಾಗಲಿ.

***********

# ॥ ಶ್ರೀದಕ್ಷಿಣಾಮೂರ್ತ್ಯಷ್ಟಕಮ್ ॥

**ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ**
**ನಿಜಾಂತರ್ಗತಂ**
**ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ**
**ಯಥಾ ನಿದ್ರಯಾ ।**
**ಯಃ ಸಾಕ್ಷಾತ್ಕುರುತೇ ಪ್ರಬೋಧಸಮಯೇ**
**ಸ್ವಾತ್ಮಾನಮೇವಾದ್ವಯಂ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥1॥**

ಯಾವ ಪರಮಾತ್ಮನು, ಕನ್ನಡಿಯಲ್ಲಿ ಕಾಣುವ ನಗರಕ್ಕೆ ಸಮಾನವಾದ, ಈ ನಾಮರೂಪಾತ್ಮಕವಾದ ಜಗತ್ತನ್ನು ತನ್ನಲ್ಲಿಯೇ ಇರುವ ಮಾಯೆಯಿಂದಾಗಿ, ಕನಸಿನ ಪ್ರಪಂಚದಂತೆ ತನಗಿಂತ ಹೊರಗೆ ಇರುವಂತೆ ನೋಡುತ್ತ, ಜ್ಞಾನೋತ್ಪತ್ತಿಯ ಬಳಿಕ ಅದ್ವಿತೀಯನಾದ ತನ್ನಾತ್ಮನನ್ನೇ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೋ, ಅಂತಹ ಶ್ರೀಗುರುಮೂರ್ತಿಯಾದ ದಕ್ಷಿಣಾಮೂರ್ತಿಗೆ ಈ ನನ್ನ ನಮನವು ಸಲ್ಲಲಿ.

**ಬೀಜಸ್ಯಾಂತರಿವಾಂಕುರೋ ಜಗದಿದಂ**
**ಪ್ರಾಙ್ ನಿರ್ವಿಕಲ್ಪಂ ಪುನಃ**
**ಮಾಯಾಕಲ್ಪಿತದೇಶಕಾಲಕಲನಾ–**
**ವೈಚಿತ್ರ್ಯಚಿತ್ರೀಕೃತಮ್ ।**
**ಮಾಯಾವೀವ ವಿಜೃಂಭಯತ್ಯಪಿ ಮಹಾ–**
**ಯೋಗೀವ ಯಃ ಸ್ವೇಚ್ಛಯಾ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥2॥**

ಸೃಷ್ಟಿಗೆ ಮೊದಲು ಈ ಪ್ರಪಂಚವು, ಬೀಜದೊಳಗೆ ಅಂಕುರವು ಇರುವಂತೆ, ಪರಮಾತ್ಮನಲ್ಲಿಯೇ ಅವ್ಯಕ್ತ ಸ್ಥಿತಿಯಲ್ಲಿತ್ತು. ಪರಮಾತ್ಮಾಧೀನವಾದ ಮಾಯೆಯಿಂದ ಸೃಷ್ಟಿಯಾದ ಬಳಿಕ ಕಲ್ಪಿತ

ದೇಶಕಾಲಗಳ ಸಂಬಂಧದಿಂದ ಪ್ರಪಂಚವು ಚಿತ್ರವಿಚಿತ್ರವಾಗಿ ತೋರುತ್ತಿದೆ. ಐಂದ್ರಜಾಲಿಕನಂತೆ, ಮಹಾಯೋಗಿಯಂತೆ ಇರುವ ಯಾವ ಪರಮಾತ್ಮನು ಕಾಣದ ಸ್ಥಿತಿಯಲ್ಲಿದ್ದ ಈ ಪ್ರಪಂಚವನ್ನು ಕಾಣುವಂತೆ ಮಾಡಿದನೋ, ಅಂತಹ ಶ್ರೀಗುರುಮೂರ್ತಿಯಾದ ದಕ್ಷಿಣಾಮೂರ್ತಿಗೆ ಈ ನನ್ನ ನಮನವು ಸಲ್ಲಲಿ.

**ಯಸ್ಯೈವ ಸ್ಫುರಣಂ ಸದಾತ್ಮಕಮಸತ್–**
**ಕಲ್ಪಾರ್ಥಕಂ ಭಾಸತೇ**
**ಸಾಕ್ಷಾತ್ತತ್ತ್ವಮಸೀತಿ ವೇದವಚಸಾ**
**ಯೋ ಬೋಧಯತ್ಯಾಶ್ರಿತಾನ್ ।**
**ಯತ್ಸಾಕ್ಷಾತ್ಕರಣಾದ್ಭವೇನ್ನ**
**ಪುನರಾವೃತ್ತಿರ್ಭವಾಂಭೋನಿಧೌ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥3॥**

ಯಾವ ಪರಮಾತ್ಮನ ಚೈತನ್ಯರೂಪವಾದ ಬೆಳಕೇ ಅಸತ್ತಾದ ಜಡವಸ್ತುಗಳಲ್ಲಿ ಸೇರಿಕೊಂಡು ಅವುಗಳನ್ನೂ ತೋರಿಸುವುದೋ, ಯಾವ ಪರಮಾತ್ಮನು ತನ್ನನ್ನು ವಿಧಿವತ್ತಾಗಿ ಆಶ್ರಯಿಸಿದವರಿಗೆ, 'ತತ್ತ್ವಮಸಿ' ಎಂಬ ವೇದವಾಕ್ಯದಿಂದ ನೇರವಾಗಿ ತಾನೇ ಸ್ವಸ್ವರೂಪವನ್ನೂ ತಿಳಿಸಿಕೊಡುವನೋ, ಮತ್ತು ಯಾವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದರಿಂದ ಜೀವಿಯು ಮತ್ತೆ ಮತ್ತೆ ಜನ್ಮವೆತ್ತಿ ಸಂಸಾರಸಾಗರದಲ್ಲಿ ಬೀಳಲಾರನೋ, ಅಂತಹ ಶ್ರೀಗುರುಮೂರ್ತಿಯಾದ ದಕ್ಷಿಣಾಮೂರ್ತಿಗೆ ನನ್ನ ನಮನವು ಸಲ್ಲಲಿ.

**ನಾನಾಚ್ಛಿದ್ರಘಟೋದರಸ್ಥಿತಮಹಾ–**
**ದೀಪಪ್ರಭಾಭಾಸ್ವರಂ**
**ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ**
**ಬಹಿಃ ಸ್ಪಂದತೇ ।**

**ಜಾನಾಮೀತಿ ತಮೇವ ಭಾಂತಮನುಭಾ–**
**ತ್ಯೇತತ್ಸಮಸ್ತಂ ಜಗತ್**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥4॥**

ಯಾರ ಜ್ಞಾನವು ಅನೇಕವಿಧವಾದ ರಂಧ್ರಗಳುಳ್ಳ ಮಡಕೆಯೊಳಗಿರುವ ದೊಡ್ಡದೀಪದ ಬೆಳಕಿನಂತೆ ಪ್ರಕಾಶಿಸುತ್ತ ಕಣ್ಣು ಮೊದಲಾದ ಇಂದ್ರಿಯಗಳ ಮಾರ್ಗವಾಗಿ ಹೊರಚಿಮ್ಮುತ್ತದೆಯೋ, ಪ್ರಕಾಶಮಾನನಾಗಿರುವ ಅವನನ್ನೇ ಅನುಸರಿಸಿ ಈ ಎಲ್ಲ ಪ್ರಪಂಚವನ್ನೂ 'ನಾನು ತಿಳಿದುಕೊಳ್ಳುತ್ತೇನೆ' ಎಂದು ಪ್ರಕಾಶಿಸುತ್ತದೆಯೋ ಅಂತಹ ಗುರುಸ್ವರೂಪನಾದ ಶ್ರೀ ದಕ್ಷಿಣಾಮೂರ್ತಿಗೆ ಈ ನನ್ನ ನಮಸ್ಕಾರವು ಸಲ್ಲಲಿ.

**ದೇಹಂ ಪ್ರಾಣಮಪೀಂದ್ರಿಯಾಣ್ಯಪಿ ಚಲಾಂ**
**ಬುದ್ಧಿಂ ಚ ಶೂನ್ಯಂ ವಿದುಃ**
**ಸ್ತ್ರೀಬಾಲಾಂಧಜಡೋಪಮಾಸ್ತ್ವಹಮಿತಿ**
**ಭ್ರಾಂತಾ ಭೃಶಂ ವಾದಿನಃ ।**
**ಮಾಯಾಶಕ್ತಿವಿಲಾಸಕಲ್ಪಿತಮಹಾ–**
**ವ್ಯಾಮೋಹಸಂಹಾರಿಣೇ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥5॥**

ಸಾಮಾನ್ಯವಾಗಿ ಲೋಕದಲ್ಲಿ ಹೆಂಗಸರು, ಎಳೆಯರು, ಕುರುಡರು ಮತ್ತು ತಿಳಿವಳಿಕೆಯಿಲ್ಲದವರು ಇವರೆಲ್ಲರಿಗೆ ಹೋಲಿಸಬಹುದಾದ ಹಾಗೂ ಅಜ್ಞಾನಕ್ಕೆ ಒಳಗಾಗಿರುವ ಕೆಲವು ವಾದಿಗಳು ದೇಹ, ಪ್ರಾಣ, ಇಂದ್ರಿಯ, ಬುದ್ಧಿ ಅಥವಾ ಶೂನ್ಯವನ್ನೇ ಆತ್ಮನೆಂದು ಹೇಳುತ್ತಾರೆ. ಮಾಯಾಶಕ್ತಿಯಿಂದ ಉಂಟಾಗಿರುವ

ಇಂತಹ ಭ್ರಾಂತಿಯನ್ನು ಯಾವನು ಹೋಗಲಾಡಿಸುವನೋ ಅಂತಹ ಗುರು ಶ್ರೀದಕ್ಷಿಣಾಮೂರ್ತಿಗೆ ನನ್ನ ನಮನವನ್ನು ಸಲ್ಲಿಸುವೆ.

**ರಾಹುಗ್ರಸ್ತದಿವಾಕರೇಂದುಸದೃಶೋ**
**ಮಾಯಾಸಮಾಚ್ಛಾದನಾತ್**
**ಸನ್ಮಾತ್ರಃ ಕರಣೋಪಸಂಹರಣತೋ**
**ಯೋಽಭೂತ್ಸುಷುಪ್ತಃ ಪುಮಾನ್ ।**
**ಪ್ರಾಗಸ್ವಾಪ್ಸಮಿತಿ ಪ್ರಬೋಧಸಮಯೇ**
**ಯಃ ಪ್ರತ್ಯಭಿಜ್ಞಾಯತೇ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥6॥**

ಗ್ರಹಣದ ಸಮಯದಲ್ಲಿ ರಾಹುವಿನಿಂದ ಕಬಳಿಸಲ್ಪಟ್ಟ ಸೂರ್ಯಚಂದ್ರರು ಹೇಗೆ ಮಸುಕಾಗಿ ಕಾಣುತ್ತಾರೋ, ಹಾಗೆಯೇ ಸುಷುಪ್ತಿಯಲ್ಲಿ(ಗಾಢ ನಿದ್ರೆಯಲ್ಲಿ) ಮಾಯೆ ಆವರಿಸಿ ಇಂದ್ರಿಯಕ್ರಿಯೆಗಳೆಲ್ಲ ನಿಂತು ಹೋಗಿರುವುದರಿಂದ ಯಾವ ಪರಮಾತ್ಮನು ಅಸ್ತಿತ್ವ ಮಾತ್ರ ಸ್ವರೂಪನಾಗಿರುವನೋ ಮತ್ತು ಎಚ್ಚರವಾದಾಗ ಈ ಹಿಂದೆ ನಾನು ಚೆನ್ನಾಗಿ ನಿದ್ರಿಸಿದೆನು ಎಂದು ತನ್ನ ಅನುಭವವನ್ನು ಜ್ಞಾಪಿಸಿಕೊಳ್ಳುವನೋ ಇಂತಹ ಶ್ರೀಗುರುಮೂರ್ತಿಯಾದ ದಕ್ಷಿಣಾಮೂರ್ತಿಗೆ ನನ್ನ ನಮನವು ಸಲ್ಲಲಿ.

**ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ**
**ಸರ್ವಾಸ್ವವಸ್ಥಾಸ್ವಪಿ**
**ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಃ**
**ಸ್ಫುರಂತಂ ಸದಾ ।**
**ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ**
**ಯೋ ಮುದ್ರಯಾ ಭದ್ರಯಾ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥7॥**

ಪರಸ್ಪರ ಬೇರೆ ಬೇರೆಯೇ ಆಗಿರುವ ಬಾಲ್ಯ, ಕೌಮಾರ, ವಾರ್ಧಕ್ಯ, ಯೌವನ ಮೊದಲಾದ ಅವಸ್ಥೆಗಳಲ್ಲಿಯೂ ಮತ್ತು ಎಚ್ಚರ, ನಿದ್ರೆ, ಕನಸು, ಮೂರ್ಛೆ ಮುಂತಾದ ಅವಸ್ಥೆಗಳಲ್ಲಿಯೂ ನಿರಂತರವಾಗಿ ಅನುಸರಿಸಿಕೊಂಡೇ ಬರುತ್ತಿರುವ ಹಾಗೂ ಶರೀರದೊಳಗೆ ನಾನು, ಎಂದು ಸದಾಕಾಲ ಸ್ಫುರಿಸುತ್ತಿರುವ ತನ್ನಾತ್ಮನನ್ನೇ ಯಾವ ಪರಮಾತ್ಮನು ತನ್ನ ಭಕ್ತರಿಗೆ ಕೈಯಲ್ಲಿ ಹಿಡಿದ ಮಂಗಳಕರವಾದ ಜ್ಞಾನಮುದ್ರೆಯಿಂದ ತೋರಿಸುತ್ತಿರುವನೋ ಅಂತಹ ಶ್ರೀಗುರು ದಕ್ಷಿಣಾಮೂರ್ತಿಗೆ ನನ್ನ ನಮನವು ಸಲ್ಲಲಿ.

**ವಿಶ್ವಂ ಪಶ್ಯತಿ ಕಾರ್ಯಕಾರಣತಯಾ**
**ಸ್ವಸ್ವಾಮಿಸಂಬಂಧತಃ**
**ಶಿಷ್ಯಾಚಾರ್ಯತಯಾ ತಥೈವ**
**ಪಿತೃಪುತ್ರಾದ್ಯಾತ್ಮನಾ ಭೇದತಃ ।**
**ಸ್ವಪ್ನೇ ಜಾಗ್ರತಿ ವಾ ಯ ಏಷ ಪುರುಷೋ**
**ಮಾಯಾಪರಿಭ್ರಾಮಿತಃ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥8॥**

ಪರಮಾತ್ಮನು ಪರಿಪೂರ್ಣನು. ಹಾಗಿದ್ದರೂ ಮಾಯೆಯಿಂದಾಗಿ ತಾನು ಸಂಸಾರಿ ಎಂದು ಭಾವಿಸಿರುವ ಆತನು ಎಚ್ಚರ, ಕನಸು ಈ ಅವಸ್ಥೆಗಳಲ್ಲಿ ಈ ಪ್ರಪಂಚವನ್ನು ಕಾರ್ಯಕಾರಣಸಂಬಂಧವುಳ್ಳದ್ದೆಂದೂ ಸ್ವಾಮಿ–ಭೃತ್ಯ ಸಂಬಂಧವುಳ್ಳದ್ದೆಂದೂ, ಗುರು–ಶಿಷ್ಯ, ತಂದೆ–ಮಗನೆಂಬ ಸಂಬಂಧವುಳ್ಳದ್ದೆಂದೂ ಬಗೆ ಬಗೆಯ ಭೇದಭಾವದಿಂದ ನೋಡುತ್ತಿರುತ್ತಾನೆ. ಅಂತಹ ಗುರು ಶ್ರೀ ದಕ್ಷಿಣಾಮೂರ್ತಿಗೆ ನನ್ನ ನಮನವು ಸಲ್ಲಲಿ.

**ಭೂರಂಭಾಂಸ್ಯನಲೋಽನಿಲೋಽಂಬರ–**
**ಮಹರ್ನಾಥೋ ಹಿಮಾಂಶುಃ ಪುಮಾನ್**

**ಇತ್ಯಾಭಾತಿ ಚರಾಚರಾತ್ಮಕಮಿದಂ**
**ಯಸ್ಯೈವ ಮೂರ್ತ್ಯಷ್ಟಕಮ್ ।**
**ನಾನ್ಯತ್ಕಿಂಚನ ವಿದ್ಯತೇ ವಿಮೃಶತಾಂ**
**ಯಸ್ಮಾತ್ಪರಸ್ಮಾದ್ವಿಭೋಃ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ**
**ಶ್ರೀದಕ್ಷಿಣಾಮೂರ್ತಯೇ ॥9॥**

ನಮ್ಮ ಕಣ್ಣಿಗೆ ಕಾಣಿಸುತ್ತಿರುವ ಈ ಜಗತ್ತೇ ಪರಮಾತ್ಮನ ಬಾಹ್ಯರೂಪವಾಗಿದೆ. ಏಕೆಂದರೆ ಮಣ್ಣು, ನೀರು, ಬೆಂಕಿ, ಗಾಳಿ, ಆಕಾಶ, ಸೂರ್ಯಚಂದ್ರರು ಮತ್ತು ಚರಾಚರಾತ್ಮಕವಾದ ಈ ಜಗತ್ತು, ಇವೆಲ್ಲವೂ ಪರಮಾತ್ಮನ ಅಷ್ಟ (ರೂಪ) ಮೂರ್ತಿಗಳಾಗಿಯೇ ತೋರಿಬರುತ್ತವೆ. ತಾತ್ವಿಕವಾಗಿ ವಿಚಾರ ಮಾಡುವವರಿಗೆ ಸರ್ವಕಾರಣನೂ, ಸರ್ವಶ್ರೇಷ್ಠನೂ ಸರ್ವವ್ಯಾಪಕನೂ ಆದ ಪರಮಾತ್ಮನಿಗಿಂತ ಮಿಗಿಲಾದುದು ಬೇರೇನೂ ಇಲ್ಲವೇ ಇಲ್ಲ. ಅಂತಹ ಪರಮಾತ್ಮರೂಪೀ ಶ್ರೀಗುರು ದಕ್ಷಿಣಾಮೂರ್ತಿಗೆ ನನ್ನ ನಮನವು ಸಲ್ಲಲಿ.

**ಸರ್ವಾತ್ಮತ್ವಮಿತಿ ಸ್ಫುಟೀಕೃತಮಿದಂ**
**ಯಸ್ಮಾದಮುಷ್ಮಿನ್‌ಸ್ತವೇ**
**ತೇನಾಸ್ಯ ಶ್ರವಣಾತ್ತದರ್ಥಮನನಾತ್**
**ಧ್ಯಾನಾಚ್ಚ ಸಂಕೀರ್ತನಾತ್ ।**
**ಸರ್ವಾತ್ಮತ್ವಮಹಾವಿಭೂತಿಸಹಿತಂ**
**ಸ್ಯಾದೀಶ್ವರತ್ವಂ ಸ್ವತಃ**
**ಸಿದ್ಧ್ಯೇತ್ ತತ್ಪುನರಷ್ಟಧಾ ಪರಿಣತಂ**
**ಚೈಶ್ವರ್ಯಮವ್ಯಾಹತಮ್ ॥10॥**

ಹೀಗೆ ಈ ಸ್ತೋತ್ರದಲ್ಲಿ ಉಪನಿಷತ್ತುಗಳಲ್ಲಿ ಹೇಳಿರುವ ಜೀವನ ಸರ್ವಾತ್ಮಭಾವವೇ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಆದ್ದರಿಂದ ಯಾರು ಈ ಸ್ತೋತ್ರವನ್ನು ಸದಾ ಶ್ರವಣ ಮಾಡುತ್ತಾರೋ, ಶ್ರವಣ ಮಾಡಿದ್ದನ್ನು ಮನನ ಮಾಡುತ್ತಾರೋ, ಶ್ರವಣ ಮನನಗಳಿಂದ ತಿಳಿದಿದ್ದನ್ನು

ನಿರಂತರ ಧ್ಯಾನ ಮಾಡುತ್ತಾರೋ ಮತ್ತು ಆ ತತ್ತ್ವವನ್ನು ಬೇರೆಯವರಿಗೂ ತಿಳಿಸಿಕೊಡುತ್ತಾರೋ, ಅಂತಹವರಿಗೆ ಸರ್ವಾತ್ಮತ್ವವೆಂಬ ಮಹಾಸಂಪತ್ತಿನಿಂದ ಕೂಡಿದ ಪರಮೇಶ್ವರಭಾವವು ತಾನಾಗಿಯೇ ಉಂಟಾಗುವುದು. (ಅಂದರೆ ಅವರಲ್ಲಿಯೇ ಇರುವಂತಹ ಈಶ್ವರತ್ವವು ಈಗ ತಿಳಿದು ಬರುವುದು) ಮತ್ತು ಯಾವ ತೊಂದರೆಯು ಇಲ್ಲದಂತೆ ಅಂತಹವರಿಗೆ ಅಣಿಮಾದಿ ಅಷ್ಟೈಶ್ವರ್ಯಗಳು ಸಿದ್ಧಿಸುವವು.

******